**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 8/2025** **ಅಸಾ.18**

**ಹೆ.ಸಾ.1**

| | | |
|---|---|---|
| ಸಾಕ್ಷಿದಾರರ ಹೆಸರು | - | ಮಾಂತೇಶ್ |
| ತಂದೆಯ ಹೆಸರು | - | ವೀರಯ್ಯ |
| ವಯಸ್ಸು | - | 32 ವರ್ಷ |
| ಉದ್ಯೋಗ | - | ಮುನಿಸಿಪಲ್ ಕಮೀಶನರ್, ನಗರಸಭೆ, ಉಡುಪಿ |
| ವಿಳಾಸ | - | ಉಡುಪಿ. |

ದಿನಾಂಕಃ 03-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು ಕಳೆದ 11 ತಿಂಗಳಿನಿಂದ ನಗರಸಭೆ, ಉಡುಪಿ ಇಲ್ಲಿ ಪೌರಾಯುಕ್ತನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 22-05-2025 ರಂದು ಪತ್ರ ಬರೆದು ಮೂಡನಿಡಂಬೂರು ಗ್ರಾಮದ ಶಿರಿಬೀಡು ವಾರ್ಡ್, ಉಡುಪಿ ಹಳೆ ಕೆ.ಎಸ್.ಆರ್.ಟಿ.ಸಿ .ಬಸ್ಸು ನಿಲ್ದಾಣದ ಬಳಿಯ ಕೃಷ್ಣ ಕಾಂಪ್ಲೆಕ್ಸ್ ವಾಣಿಜ್ಯ ಕಟ್ಟಡ ಸಂಖ್ಯೆ 11-1-6 ಬಿ 21(1) ಕಟ್ಟಡದ ಮಾಲೀಕರ ವಿವರ ಕೋರಿರುತ್ತಾರೆ. ಕಚೇರಿಯ ಕಂದಾಯ ನಿರೀಕ್ಷಕರ ವರದಿಯ ಅನುಸಾರ ಸದ್ರಿ ಕಟ್ಟಡವು ಶ್ರೀ ದಾಮೋದರ ಸಿ. ಕುಂದರ್ ಇವರ ಹೆಸರಿನಲ್ಲಿದ್ದು, ಕಚೇರಿಯ ಕೆ.ಎಂ.ಎಫ್-24 ಆಸ್ತಿ ವಹಿಯಲ್ಲಿ ದಾಖಲಾಗಿರುತ್ತದೆ. ಅದನ್ನು ಆಧರಿಸಿ ತನಿಖಾಧಿಕಾರಿಗಳಿಗೆ ವರದಿ ನೀಡಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ. ವಕೀಲರಿಂದಃ</u>**

ಸದ್ರಿ ಕಟ್ಟಡಕ್ಕೆ ನಾನು ಭೇಟಿ ನೀಡಿಲ್ಲ. ಅದರ ಮಾಲೀಕರನ್ನು ಕರೆಸಿ ವಿಚಾರಿಸಿಲ್ಲ. ಪೋಲಿಸರು ಕಟ್ಟಡದ ವಿವರಣೆ ಕೊಟ್ಟಿರುತ್ತಾರೆ. ಪೋಲಿಸರ ಕೋರಿಕೆ ಮೇರೆಗೆ ಯಾವುದೇ ದಾಖಲಾತಿಯನ್ನು ಪರಿಶೀಲನೆ ಮಾಡದೇ ನಿಪಿ-26 ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ -ಇಲ್ಲ-</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.